# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ, ವಿಜಯನಗರ ಉಪವಿಭಾಗ

---

### ವಾರ್ಡ್ ನಂ.122 : ಕೆ.ಪಿ ಅಗ್ರಹಾರ

---

**ದಿನಾಂಕ: 05.02.2022 ರಂದು 11.00 ಗಂಟೆಗೆ ಶ್ರೀ.ರವಿವರ್ಮ.ಬಿ ನೋಡಲ್ ಅಧಿಕಾರಿ, ವಾರ್ಡ್ ನಂ. 122 ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಜಯನಗರ ಉಪವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ. ರವಿವರ್ಮ ಬಿ | ನೋಡಲ್ ಅಧಿಕಾರಿ–ವಾರ್ಡ್ ನಂ.122 |
| 2 | ಶ್ರೀ ಹೇಮಂತ್ ಕುಮಾರ್ ಎಸ್ ಕೆ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು–ವಾರ್ಡ್ 122 |
| 3 | ಶ್ರೀ. ಡಿ ರಾಮ್ ಕುಮಾರ್ | ಕಿ.ಆ.ಪ |
| 4 | ಶ್ರೀಮತಿ. ಗುಣ.ಎಸ್ | LW (SWM) |
| 5 | ಶ್ರೀಮತಿ. ಮಹದೇವಮ್ಮ | LW (SWM) |

**:ನಡಾವಳಿಯ ವರದಿ:**

➢ ಕಾರ್ಯದರ್ಶಿಗಳಾದ ಶ್ರೀ ಹೇಮಂತ್ ಕುಮಾರ್ ಎಸ್ ಕೆ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್ ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

- ರಸ್ತೆಗುಂಡಿ ನಿರ್ವಹಣೆ ಬಗ್ಗೆ:

- ಹೇಮಂತ್ ಕುಮಾರ್ ಎಸ್.ಕೆ ಸಹಾಯಕ ಅಭಿಯಂತರರು, ವಾರ್ಡ್ ನಂ.122 ರವರು ಮಾತನಾಡಿ, ವಾರ್ಡ್ ನಲ್ಲಿ ಇರುವ 90% ರಸ್ತೆಗುಂಡಿಗಳನ್ನು ಮುಚ್ಚಲಾಗಿದ್ದು, ಉಳಿಕೆ ರಸ್ತೆಗುಂಡಿ ಮುಚ್ಚುವ ಕಾಮಗಾರಿ ಕೆಲಸ ಪ್ರಗತಿಯಲ್ಲಿ ಇರುತ್ತದೆ ಹಾಗೂ ವಾರ್ಡ್‌ನಲ್ಲಿ ಡಾಂಬರಿಕರಣ ಕಾಮಗಾರಿ ಹಾಗೂ ಸಿ.ಸಿ ರಸ್ತೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಎಂದು ಸಭೆಗೆ ತಿಳಿಸಿದರು.

- ಸ್ವಚ್ಛತೆ ಮತ್ತು ಘನ ತ್ಯಾಜ್ಯ ನಿರ್ವಹಣೆ ಬಗ್ಗೆ:

- ನೋಡಲ್ ಅಧಿಕಾರಿರವರು ವಾರ್ಡ್ 122ರ ವ್ಯಾಪ್ತಿಯಲ್ಲಿರುವ ಬ್ಲಾಕ್ ಸ್ಪಾಟ್‌ಗಳ ಬಗ್ಗೆ ವಿಚಾರಿಸಲಾಗೀ, ಇದಕ್ಕೆ ಶ್ರೀ.ಡಿ.ರಾಮ್.ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.122 ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿನಿತ್ಯವು ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸುಲಾಗುತ್ತಿದೆಂದು ತಿಳಿಸಿದರು. ಹಾಗೂ ಕಡಪಸ್ವಾಮಿ ಮಠದ ರಸ್ತೆಯಲ್ಲಿ ಡೆಬ್ರೀಸ್ ಇರುವುದಾಗಿ ತಿಳಿಸಿ ತೆರವುಗೊಳಸಬೇಕೆಂದು ಸಭೆಗೆ ತಿಳಿಸಿದರು.

- **ಕೋವಿಡ್-19, ಸಾಂಕ್ರಾಮಿಕ ರೋಗದ ಬಗ್ಗೆ**

  ⁜ ಕಡಪಾಸ್ವಾಮಿ ಮಠದ ಶಾಲೆಯಲ್ಲಿ ಮತ್ತು ಗುರುಕುಲ ಶಾಲೆಯಲ್ಲಿ ಪ್ರತಿ ದಿನ ಸಾರ್ವಜನಿಕರಿಗೆ ಕೋವಿಡ್ ಲಸಿಕೆ ನೀಡುಲಾಗುತ್ತಿದೆ ಹಾಗೂ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದೆಂದು ಸಭೆಗೆ ತಿಳಿಸಿದರು.

- **ಒಂಟಿ ಮನೆ ನಿರ್ಮಾಣ ಫಲಾನುಭವಿಗಳ ಆಯ್ಕೇ ಮಾಡುವ ಬಗ್ಗೆ.**

  ⁜ ಈ ಕೇಳಕಂಡ ಫಲಾನುಭವಿಗಳು ಒಂಟಿ ಮನೆ ಅನುದಾವನ್ನು ನೀಡಲು ಮನವಿ ಸಲ್ಲಿಸಿದ್ದು, ಸದರಿ ಫಲಾನುಭವಿಗಳ ಸ್ವತ್ತಿನ ದಾಖಲಾತಿಗಳನ್ನು ಪರಿಶೀಲಿಸಿ, ಕಡತಗಳನ್ನು ಕಂದಾಯ ಅಧಿಕಾರಿಗಳು ವರದಿಯನ್ನು ಸಲ್ಲಿಸಿರುತ್ತಾರೆ. ಅದರಂತೆ ಕಡತಗಳನ್ನು ಪರಿಶೀಲಿಸಲಾಗಿ ಫಲಾನುಭವಿಗಳ ಒಂಟಿ ಮನೆ ಅನುದಾನವನ್ನು ಮಂಜೂರು ಮಾಡಲು ಅರ್ಹರಾಗಿದ್ದು, ಸದರಿ ವಿಷಯವನ್ನು ಸಭೆಗೆ ಮಂಡಿಸಲಾಗಿ ಸಭೆಯಲ್ಲಿ ಸದರಿ ಫಲಾನುಭವಿಗಳಿಗೆ ಅನುದಾನವನ್ನು ನೀಡಲು ಅಯ್ಕೆ ಮಾಡಲಾಗಿದೆ.

| ಕ್ರ ಸಂ | ಫಲಾನುಭವಿಗಳ ಹೆಸರು | ತಂದೆ/ಗಂಡನ ಹೆಸರು | ಜಾತಿ | ವಿಳಾಸ |
|---|---|---|---|---|
| 1. | ಶ್ರೀ.ಲಕ್ಷ್ಮೀಪತಿ. | ಶ್ರೀ.ಮುನಿಸ್ವಾಮಪ್ಪ | II A | ಪಿ.ಐ.ಡಿ ನಂ: 32-28-20/11 ನಂ: 20/11, 20ನೇ ಅಡ್ಡರಸ್ತೆ, ಭುವನೇಶ್ವರಿನಗರ, ಮಾಗಡಿ ರಸ್ತೆ, ಕೆ.ಪಿ ಅಗ್ರಹಾರ ವಾರ್ಡ್ ನಂ.122. |
| 2. | ಶ್ರೀ.ಶಾಂತಕುಮಾರ್.ಎಂ | ಲೇ॥ ಶ್ರೀ.ಮರಿಮಾದಪ್ಪ | III B | ಪಿ.ಐ.ಡಿ ನಂ: 32-28-30/3, ನಂ: 20ನೇ ಕ್ರಾಸ್, ಭುವನೇಶ್ವರಿನಗರ, ಕೆ.ಪಿ ಅಗ್ರಹಾರ ವಾರ್ಡ್ ನಂ.122. |
| 3. | ಶ್ರೀ.ಎನ್.ತುಳಸಿಕಾಂತರಾಜನ್. | ಶ್ರೀ.ಎಲ್.ನಾಗರಾಪ್ಪ | II A | ಪಿ.ಐ.ಡಿ ನಂ: 32-22-34/12-2 ನಂ:34/12-2, 15ನೇ ಅಡ್ಡರಸ್ತೆ, ಭುವನೇಶ್ವರಿನಗರ, ಕೆ.ಪಿ ಅಗ್ರಹಾರ ವಾರ್ಡ್ ನಂ.122. |

➢ ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿ/ನೌಕರರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ವಾರ್ಡಿನ ಕುಂದುಕೊರತೆಗಳತ್ತ ಗಮನಹರಿಸಿ ವಾರ್ಡ್ ಅಭಿವೃದ್ಧಿ ಪಡಿಸಲು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

➢ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಹೇಮಂತ್ ಕುಮಾರ್ ಎಸ್ ಕೆ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

05/02/2022

ಸದಸ್ಯ ಕಾರ್ಯದರ್ಶಿ-ವಾರ್ಡ್ 122 ಹಾಗೂ
**ಸಹಾಯಕ ಅಭಿಯಂತರರು,**

05/02/2022
(ರವಿವರ್ಮ.ಬಿ)
**ನೋಡಲ್ ಅಧಿಕಾರಿ ವಾರ್ಡ್-122**

ಪ್ರತಿಯನ್ನು:

1) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
2) ಕಾರ್ಯಪಾಲಕ ಅಭಿಯಂತರರು (ವಿಜಯನಗರ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
3) ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿಜಯನಗರ) ರವರ ಮಾಹಿತಿಗಾಗಿ ಕಳುಹಿಸಿದೆ.
4) ಸಹಾಯಕ ಕಂದಾಯ ಅಧಿಕಾರಿ (ವಿಜಯನಗರ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.122 ರವರ ಮಾಹಿತಿಗಾಗಿ.
6) ಸಹಾಯಕ ಅಭಿಯಂತರರು (ವಿದ್ಯುತ್ ಬೆಸ್ಕಾಂ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7) ಸಹಾಯಕ ಅಭಿಯಂತರರು ವಿದ್ಯುತ್ (ಬೀದಿದೀಪ) ಬಿಬಿಎಂಪಿ ರವರ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ.
8) ಕಛೇರಿ ಕಡತಕ್ಕೆ.